ಪ್ರಧಾನ ಸಿವಿಲ್ ಜೆಡ್ಜ್ ವತ್ತು ಜೆಎಮ್‌ಎಫ್ ಸಿ ನ್ಯಾಯಾಲಯ, ಕೆ. ಆರ್. ನಗರ

ಸಿಸಿ -258/2019

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಧನರಾಜು | ಸಿಡಬ್ಲ್ಯೂ 1 |
| ತಂದೆಯ ಹೆಸರು | - | ಗೋವಿಂದಯ್ಯ | ಪಿಡಬ್ಲ್ಯೂ 1 |
| ವಯಸ್ಸು | - | 24 ವರ್ಷ | |
| ಕೆಲಸ | - | ಚಾಲಕ | ಸಾ.ಪ್ರ.ಬೋ |
| ವಾಸ | - | ಬಸವರಾಜಪುರ | ದಿ. 28.01.2020 |

ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ

1) ಚಾಸಾ 2 ನನ್ನ ತಾಯಿ. ಚಾಸಾ 2 ರಿಂದ 6 ನನಗೆ ಗೊತ್ತು. ಆರೋಪಿತರು ನಮ್ಮ ಗ್ರಾಮದವರು, ಅವರ ಪರಿಚಯ ನನಗೆ ಇದೆ. ದಿನಾಂ 30-11–2014 ರಂದು ರಾತ್ರಿ 9 ಗಂಟೆ ಸಮಯದಲ್ಲಿ ಮನೆಯಲ್ಲಿ ನಾನು ಮತ್ತು ಚಾಸಾ 2 ಇದ್ದಾಗ ಆರೋಪಿತರೆಲ್ಲರೂ ನಮ್ಮ ಮನೆ ಒಳಗೆ ನುಗ್ಗಿ ಆರೋಪಿತರು ನನ್ನ ಮೈಕೈಗೆ ಕೈಗಳಿಂದ ಹೊಡೆದು ನೋವು ಮಾಡಿರುತ್ತಾರೆ. ಜಗಳ ಬಿಡಿಸಲು ಬಂದ ನನ್ನ ತಾಯಿಗೆ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು ನಿದ ನಿಂದಿಸಿರುತ್ತಾರೆ. ಚಾಸಾ 3 ಮತ್ತು 4 ಜಗಳ ಬಿಡಿಸಿ ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಪೋಲಿಸರು ಆಸ್ಪತ್ರೆಯಲ್ಲಿ ನನ್ನ ಹೇಳಿಕೆ ದೂರನ್ನು ಪಡೆದಿರುತ್ತಾರೆ. ಹೇಳಿಕೆ ದೂರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು 1ಎ ಎಂದು ಗುರುತಿಸಲಾಯಿತು. ಪೋಲಿಸರು ಘಟನೆ ಸಂಬಂದ ನಮ್ಮ ಗ್ರಾಮಕ್ಕೆ ಬಂದಿದ್ದರು, ಆಗ ಪೋಲಿಸರಿಗೆ ಘಟನಾ ಸ್ಥಳ ತೋರಿಸಿರುತ್ತೇನೆ. ಘಟನಾ ಸ್ಥಳದಲ್ಲಿ ಪೋಲಿಸರು ಮಹಜರ್ ಜರುಗಿಸಿರುತ್ತಾರೆ. ಸ್ಥಳ ಮಹಾಜರನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು 2ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಸಾಕ್ಷಿಯು ಗುರುತಿಸುತ್ತಾರೆ.

2) ಈ ದಿನ ಬೆಳಗ್ಗೆ ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಬರುತ್ತಿರುವಾಗ ಕೇಸ್ ಮಾಡಿ ಏನು ಮಾಡುತ್ತಿಯಾ ನೋಡುತ್ತೇವೆ ಎಂದು ಬೈದಿರುತ್ತಾರೆ.

<u>ಪಾಟೀ ಸವಾಲು</u> -

ಆರೋಪಿ ಪರ ವಕೀಲರು ಗೈರು ಹಾಜರು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

(ಶ್ರೀನಾಥ್ ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ